ಘಟ್ಟ ಹತ್ತಿದಾಗಲೋ, ಅವಳು ಮನ್ವೇಲನ ಪ್ರೀತಿಯ ಬಲೆಯಲ್ಲಿ ಬಿದ್ದಾಗಲೋ , ಅದು ಚೋಮನ ಕಣ್ಣಿಗೆ ಬಿದ್ದು ರಂಪ ರಾದ್ಧಾಂತವಾದಾಗಲೋ ಅಥವಾ ಅವನು ಆ ಜಾತಿಯಲ್ಲಿ ಹುಟ್ಟಿದ್ದು, ಆ ಬಳಿಕ ಬೇಸಾಯಗಾರನಾಗಬೇಕೆಂಬ ಕನಸು ಕಂಡದ್ದು, ಕಾಡಿನಲ್ಲಿ ಎತ್ತುಗಳು ಸಿಕ್ಕಿದ್ದು ಇವೇ ದುರಂತವೋ ಎಂದೆಲ್ಲಾ ಕೆಲವೊಮ್ಮೆ ಗೊಂದಲಗಳುಂಟಾಗುತ್ತವೆ.

ಗುರುವನದು ಹಾಗಾಯಿತು, ಚನಿಯನದು ಹೀಗಾಯಿತು. ಇವರಿಬ್ಬರು ಚೋಮನಿಂದ ದೂರಾಗಲು ಒಂದು ನೆಪವಾದರೂ ಇತ್ತು. ಅದರೆ ನೀಲ? ಅವನದು ತೀರಾ ಅನ್ಯಾಯದ ಸಾವು. ಅಲ್ಲಿದ್ದವರು ಮನಸ್ಸು ಮಾಡಿದ್ದರೆ, ಚೂರಾದರೂ ಮನುಷ್ಯರ ಥರ ವರ್ತಿಸಿದ್ದರೆ ಅವನು ಬದುಕುಳಿಯುತ್ತಿದ್ದ. ಒಂದು ರೀತಿಯಲ್ಲಿ ಚೋಮನಿಗೆ ತನ್ನ ಬಾಳ್ವೆಯ ಹುಣ್ಣು ಎಂಥದ್ದು ಎಂಬುವುದು ಪೂರ್ತಿಯಾಗಿ ಅರ್ಥವಾಗುವ ಸಲುವಾಗಿಯೇ ನೀಲ ಸತ್ತದ್ದಿರಬೇಕು. ಅವನು ಶವವನ್ನು ಮನೆಯೊಳಗಿರಿಸಿ ಕೊಂಡು ಬಾಗಿಲು ಹಾಕಿ ಕೂತಿದ್ದ, ಬಹುಶಃ ಕಿಂಡಿಯನ್ನೂ ಮುಚ್ಚಿ ಜಗತ್ತಿಗೇ ಬೆನ್ನು ಹಾಕಿ ಕೂತಿದ್ದ. ಆಗಲೂ ಅವನ ಎದೆಯ ದುಗುಡವನ್ನು ನಿರಾಳವಾಗಿ ಕೇಳಿಸಿಕೊಂಡದ್ದು ಅವನ ದುಡಿ ಮಾತ್ರ. ಹಾಗಾಗಿಯೇ ಅವನಿಗೆ ಮರುದಿನ ಬೆಳಗ್ಗೆ ಎದ್ದು ದುಡಿ ಬಾರಿಸಲು ಸಾಧ್ಯವಾದದ್ದು.

ಆದರೆ ನೀಲ ಸತ್ತು ಹೋದ ಎಂದು ಚೋಮನ ಬೇಸಾಯದ ಆಸೆ ಕಮರಿ ಹೋಗುವುದಿಲ್ಲ. ಅವನ ಸಾವಿನೊಂದಿಗೆ ಅದೂ ಸತ್ತುಹೋಗಲು ಅವನೊಳಗೆ ಆ ಆಕಾಂಕ್ಷೆ ಹುಟ್ಟಿದ್ದು ನಿನ್ನೆ ಮೊನ್ನೆ ಏನೂ ಅಲ್ಲವಲ್ಲಾ! ಚೋಮನ ಬದುಕಿನ ಪ್ರತೀ ಉಸಿರನಲ್ಲೂ ತಾನು ತನ್ನದೇ ಭೂಮಿ ಉಳಬೇಕು, ತನ್ನ ಅನ್ನವನ್ನು ತನ್ನದೇ ಭೂಮಿಯಲ್ಲಿ ಬೆಳಸಬೇಕು ಎಂಬ ಆಸೆ ಇತ್ತು. ಆ ಆಸೆಯನ್ನು ಎದೆಯೊಳಗೆ ಕಾಯ್ದಿಟ್ಟುಕೊಂಡೇ ಅವನು ಇಷ್ಟು ದಿನ ಉಸಿರು ಹಿಡಿದುಕೊಂಡಿದ್ದ. ಹಾಗಾಗಿಯೇ ಅವನಿಗೆ ಕೊನೆ ಕೊನೆಗೆ ಗುರುವ ಕ್ರಿಶ್ಚಿಯನ್ನಾದರೂ ಬೇಸಾಯಗಾರನಾದನಲ್ಲ ಎನ್ನುವ ಹೆಮ್ಮೆ ಮೊಳೆತದ್ದು. ಸಾಯುವ ಮೊದಲು ಒಮ್ಮೆಯಾದರೂ ತಾನು ತನಗಾಗಿ ನೇಗಿಲು ಹಿಡಿಯಬೇಕು ಅಂತಲೇ ಅವನು ಮತಾಂತರವಾಗ ಹೊರಟದ್ದು. ದಾರಿಯಲ್ಲಿ ಗುಳಿಗನ ಕಲ್ಲು ಸಿಕ್ಕದೇ ಹೋದರೆ ಅವನು ಕ್ರಿಶ್ಚಿಯನ್ ಆಗಿಯೇ ಬಿಡುತ್ತಿದ್ದನೇನೋ? ಅಥವಾ ಚೋಮನಂತಹ ನಿಸ್ಪೃಹರಿಗೆ ಗುಳಿಗನೂ ಒಂದೇ ಏಸುವೂ ಒಂದೇ ಇರಬೇಕೇನೋ? ಒಟ್ಟಿನಲ್ಲಿ ಅವನು ಮತ್ತೆ ಮನೆಗೆ ಬಂದ. ಮನೆಯಲ್ಲಿ ಮಗಳು ಬೆಳ್ಳಿ ಮತ್ತು ಮನ್ವೇಲ ಒಟ್ಟಿಗಿರುವುದನ್ನು ಕಂಡು ಕುದ್ದು ಹೋದ, ಕಿರುಚಿದ, ಅರಚಾಡಿದ, ಅವಳನ್ನು ಮನೆಯಿಂದ ಹೊರಗೆಳೆದು ಹಾಕಿದ. ಎತ್ತುಗಳನ್ನು ಹೊಡೆದುಕೊಂಡು ಧಣಿಯರ ಗದ್ದೆಗೆ ಹೋಗಿ ಉತ್ತು ಬಂದ, ಎತ್ತುಗಳ ಋಣವನ್ನು ತೀರಿಸಲು ಅವನ್ನು ಕಾಡಿಗೆ ಬಿಟ್ಟು ಬಂದ, ನೇಗಿಲು ನೊಗಗಳನ್ನು ನೆಲಕ್ಕೆ ಕುಟ್ಟಿ ಬೆಂಕಿ ಹಚ್ಚಿ ಬಿಟ್ಟ. ಒಳಗೆ ಜ್ವಾಲಾ ರಸ ಕುದಿಯುತ್ತಿದ್ದರೂ ಹೊರಗೆ ಯಾಗದ ಅಧ್ವರ್ಯುವಂತೆ ಗಂಭೀರವಾಗಿದ್ದ. ನಡು ನಡುವೆ 'ನನ್ನ ಬೆಳ್ಳಿ ನನಗೇ ಮೋಸ ಮಾಡಿದಳೇ' ಎಂದು ನೊಂದುಕೊಳ್ಳುತ್ತಾ, ಮಗದೊಮ್ಮೆ ಅವಳದೇನೂ ತಪ್ಪೇ ಇಲ್ಲ ಎಂದು ತನ್ನನ್ನು ತಾನು ಸಂತೈಸುತ್ತಾ ಇದ್ದ.

ಕಾರಂತರು ಹೇಳುವಂತೆ ಇಲ್ಲಿ ಚೋಮ ಕಣ್ಣೆವೆಗಳು ಅಲುಗದಷ್ಟೂ ನಿರ್ಭಾವುಕ, ನಿರ್ಲಿಪ್ತನಾಗಿದ್ದ. ಖುಷಿಯಾದಾಗ ಕುಡಿದು ಕುಣಿದು ಕುಪ್ಪಳಿಸುವ, ಸಂಕಟವಾದಾಗಲೂ ಕುಡಿಯುವ ಚೋಮ ಇಲ್ಲಿ ಹೊಸ ರೀತಿ ಕಾಣಿಸುತ್ತಾನೆ. ಬದುಕಿನುದ್ದಕ್ಕೂ ಒಂದು ಗೇಣು ಮಣ್ಣಿಗಾಗಿ ಬಡಿದಾಡಿದವನು ಈಗ ಎತ್ತುಗಳನ್ನೂ ಕಾಡಿಗೆ ಅಟ್ಟಿ ಬಂದಿದ್ದ. ನೇಗಿಲನ್ನು ಸುಟ್ಟು ಹಾಕಿದಾಗಲೇ ಅವನೊಳಗಿದ್ದ ಪ್ರಚಂಡ ಮಾನವ ಪ್ರೇಮಿ ಸತ್ತು ಹೋಗಿದ್ದ. ಈಗ ಉಳಿದ್ದಿದುದು ಚೋಮನ ನೆರಳು ಮತ್ತು ಅವನ ದುಡಿ ಮಾತ್ರ.

ಹಾಗಾಗಿಯೇ ದುಡಿಯನ್ನು ಎತ್ತಿಕೊಂಡ ಅವನು ಇದೇ ಮೊದಲ ಬಾರಿ ಎಂಬಂತೆ ಕದವನ್ನು ತುಸು ಓರೆ ಮಾಡಿ ಬಾರಿಸತೊಡಗಿದ್ದು. ಪ್ರಳಯ ತಾಂಡವದ ರುದ್ರ ನಿನಾದ ಮುಚ್ಚಿದ ಬಾಗಿಲನ್ನೂ ದಾಟಿ ಹೊರ ಹೋಗುತ್ತಿತ್ತು. ಒಬ್ಬ ಅಪ್ಪಟ ಮನುಷ್ಯನ ಕನಸನ್ನು ನಿರ್ದಯವಾಗಿ ಕೊಂದ ಜಗತ್ತು ಗಾಢ ನಿದ್ರೆಯಲ್ಲಿರುವಾಗ ಚೋಮನ ದುಡಿಯ ಸದ್ದು ನಿಂತಿತು.

ಹಿಡಿದ ದುಡಿ, ಎತ್ತಿದ ಕೈ, ತುಂಬಿದ ಆವೇಶ... ಮತ್ತು ಸರಿಸುಮಾರು ತೊಂಬತ್ತು ವರ್ಷಗಳೇ ಕಳೆದರೂ ಚೋಮ ವಿಕ್ಷಿಪ್ತ ಪ್ರತಿರೋಧದ ಧ್ವನಿಯಾಗಿ ನಮ್ಮೊಳಗೆ ಇನ್ನೂ ಉಳಿದುಕೊಂಡಿದ್ದಾನೆ.

●